# Prime Minister’s meeting with the President of Guyana on the sidelines of 17th Pravasi Bhartiya Divas

January 09, 2023

## 17ನೇ ಪ್ರವಾಸಿ ಭಾರತೀಯ ದಿನದ ಅಂಗವಾಗಿ ಗಯಾನ ಅಧ್ಯಕ್ಷರೊಂದಿಗೆ ಪ್ರಧಾನಮಂತ್ರಿಗಳ ಸಭೆ

**ಜನವರಿ 09, 2023**

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, 17ನೇ ಪ್ರವಾಸಿ ಭಾರತೀಯ ದಿವಸ್ ಅಂಗವಾಗಿ ಗಯಾನ ಅಧ್ಯಕ್ಷ ಡಾ. ಎಚ್.ಇ. ಮೊಹಮದ್ ಇರ್ಫಾನ್ ಅಲಿ ಅವರನ್ನು ಸೋಮವಾರ ಇಂದೋರ್‌ನಲ್ಲಿ ಭೇಟಿಯಾದರು. ಇಂಧನ, ಮೂಲಸೌಕರ್ಯ ಅಭಿವೃದ್ಧಿ, ಔಷಧ, ಆರೋಗ್ಯ, ರಕ್ಷಣೆ, ತಂತ್ರಜ್ಞಾನ, ಸಂಶೋದನೆ ಮತ್ತು ರಕ್ಷಣಾ ಸಹಕಾರ ಸೇರಿದಂತೆ ವಿವಿಧ ವಿಷಯಗಳ ಕುರಿತು ಉಭಯ ನಾಯಕರು ಸಮಗ್ರ ಚರ್ಚೆ ನಡೆಸಿದರು.

2.ಪ್ರವಾಸಿ ಭಾರತೀಯ ದಿವಸ್ ಕಾರ್ಯಕ್ರಮದ ಅಂಗವಾಗಿ, ಭಾರತದ ಅಧಿಕೃತ ಭೇಟಿಯಲ್ಲಿರುವ ಅಲಿ ಅವರು, ಉಭಯ ರಾಷ್ಟ್ರದ ಜನರ ನಡುವಿನ 180 ವರ್ಷಗಳ ಐತಿಹಾಸಿಕ ಸ್ನೇಹ– ಸಂಬಂಧಗಳನ್ನು ಮೆಲುಕು ಹಾಕಿದರು. ಉಭಯರಾಷ್ಟ್ರಗಳ ನಡುವಿನ ಸಂಬಂಧಗಳನ್ನು ಇನ್ನಷ್ಟು ಗಟ್ಟಿಗೊಳಿಸುವ ಕುರಿತು ಪ್ರಧಾನಮಂತ್ರಿ ಅವರೊಂದಿಗೆ ಮಾತುಕತೆ ನಡೆಸಿದರು.

3. ಅಧ್ಯಕ್ಷ ಇರ್ಫಾನ್ ಅಲಿ ಅವರು ಅಧ್ಯಕ್ಷೆ ಶ್ರೀಮತಿ ದ್ರೌಪದಿ ಮುರ್ಮು ಅವರೊಂದಿಗೆ ದ್ವಿಪಕ್ಷೀಯ ಚರ್ಚೆಗಳನ್ನು ನಡೆಸಲಿದ್ದಾರೆ ಮತ್ತು 10 ಜನವರಿ 2023 ರಂದು ವಲಾಡಿಕ್ಟರಿ ಸೆಷನ್ ಮತ್ತು ಪ್ರವಾಸಿ ಭಾರತೀಯ ಸಮ್ಮಾನ್ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ. ಅವರು 11 ಜನವರಿ ಇಂದೋರ್‌ನಲ್ಲಿ ಜಾಗತಿಕ ಹೂಡಿಕೆದಾರರ ಶೃಂಗಸಭೆ 2023 ನಲ್ಲಿ ಭಾಗವಹಿಸಲಿದ್ದಾರೆ.

4. ಇಂದೋರ್ ಅಲ್ಲದೆ, ಅಧ್ಯಕ್ಷ ಅಲಿ ದೆಹಲಿ, ಕಾನ್ಪುರ, ಬೆಂಗಳೂರು ಮತ್ತು ಮುಂಬೈಗೂ ಭೇಟಿ ನೀಡಲಿದ್ದಾರೆ.

**ಇಂದೋರ್**
**ಜನವರಿ 09, 2023**

DISCLAIMER: This is an approximate translation. The original is available in English on MEA’s website and may be referred to as the official press release.